
## ನಿಮ್ಮೊಡನೆ

# ಸರ್ವ ಜನಾಂಗದ ಶಾಂತಿಯ ತೋಟ ಸುಶಿಕ್ಷಿತರು-ಬರಹಗಾರರ ಹುಡುಗಾಟ

ಜಾತಿ ಕೀಳರಿಮೆಗೆ ಕಾರಣವಾಗಬಾರದು; ಮೇಲರಿಮೆಯನ್ನಂತೂ ಹುಟ್ಟಿಸಲೇಬಾರದು. ಜಾತಿಯ ಮೇಲರಿಮೆಯನ್ನು ಸಾರ್ವಜನಿಕವಾಗಿ ಪ್ರದರ್ಶಿಸುವುದೂ ಅಸ್ಪೃಶ್ಯತೆಯ ಆಚರಣೆಯೇ. ಈ ಸೂಕ್ಷ್ಮವನ್ನು ಅರಿಯದೆ ಹೋದಲ್ಲಿ, 'ಸರ್ವ ಜನಾಂಗದ ಶಾಂತಿಯ ತೋಟ'ದ ಹಂಬಲ ಕನಸಾಗಿಯೇ ಉಳಿಯುತ್ತದೆ.




ವಿದ್ಯಾವಂತರ ಸಂಖ್ಯೆ ಹೆಚ್ಚಾದಂತೆ ಸಮಾಜದಲ್ಲಿನ ತಾರತಮ್ಯಗಳು ಕಡಿಮೆಯಾಗುತ್ತವೆ ಎನ್ನುವ ನಂಬಿಕೆಯನ್ನು ಪ್ರಚಲಿತ ವಿದ್ಯಮಾನಗಳು ಸುಳ್ಳುಮಾಡುವಂತಿವೆ. ಇತ್ತೀಚಿನ ದಿನಗಳಲ್ಲಿ ಜಾತಿ ಹೆಸರಿನಲ್ಲಿ ನಡೆಯುತ್ತಿರುವ ಸಂಘಟನೆ ಮತ್ತು ಹೋರಾಟಗಳಲ್ಲಿ ಸುಶಿಕ್ಷಿತ ವರ್ಗವೂ ಕಾಣಿಸಿಕೊಂಡಿದೆ. ಈ ಹೋರಾಟಗಳ ಮೀಸಲಿನ ಬೇಡಿಕೆಗೆ ಸಂವಿಧಾನಾತ್ಮಕ ಪರಿಹಾರ ಅಥವಾ ಸಮುದಾಯದ ಸೌಲಭ್ಯ ವಂಚಿತರಿಗೆ ದಕ್ಕಬೇಕಾದ ಪ್ರಾತಿನಿಧ್ಯದ ಒತ್ತಾಸೆಗೆ ವೈಜ್ಞಾನಿಕ ಅಧ್ಯಯನದ ನೆಲೆಗಟ್ಟಿಲ್ಲ. ಹೀಗಿರುವಾಗ ಈ ಜಾತಿ ಧ್ರುವೀಕರಣ ಪ್ರಯತ್ನಗಳು ಸಮಾಜದಲ್ಲಿನ ಜಾತೀಯ ಬಿಕ್ಕಟ್ಟುಗಳನ್ನು ಮತ್ತಷ್ಟು ಬಲಗೊಳಿಸುವ ಮೂಲಕ ಸಾಮಾಜಿಕ ಸಾಮರಸ್ಯಕ್ಕೆ ಗಾಸಿಯುಂಟುಮಾಡುವ ಸಾಧ್ಯತೆಯಿದೆ.

ಹಿಂದುಳಿದ ವರ್ಗಗಳ ಸಂಘಟನೆಯಲ್ಲಿ ಸುಶಿಕ್ಷಿತರು ತೊಡಗಿಕೊಳ್ಳುವುದು ಅನೈತಿಕವೇನೂ ಅಲ್ಲ. ಆದರೆ, ಮುಂದುವರೆದ ಜಾತಿಗಳ ಸುಶಿಕ್ಷಿತರು ತಮ್ಮ ಜಾತಿಗಳೊಂದಿಗೆ ಗುರ್ತಿಸಿಕೊಳ್ಳುವುದು ಸಾಮಾಜಿಕ ಆರೋಗ್ಯದ ದೃಷ್ಟಿಯಿಂದ ಅಪೇಕ್ಷಣೀಯವಲ್ಲ. ವಿವಿಧ ಸಮುದಾಯಗಳು ಮೀಸಲಾತಿಗಾಗಿ ನಡೆಸುತ್ತಿರುವ ಹೋರಾಟಗಳು ಪ್ರಸಕ್ತ ಸಾಮಾಜಿಕ ಸಂರಚನೆಯಲ್ಲಿ ಉಂಟು ಮಾಡಬಹುದಾದ ಪರಿಣಾಮಗಳನ್ನು ಊಹಿಸಿಕೊಳ್ಳುವುದು ಕಷ್ಟ. ಶತಮಾನಗಳಿಂದ ಶೋಷಣೆಗೊಳಗಾದ, ಈಗಲೂ ಜಾತಿಯ ಅವಮಾನಗಳಿಂದ ಸಂಪೂರ್ಣ ಹೊರಬರಲು ಸಾಧ್ಯವಾಗದ ಸಮುದಾಯಗಳಿಗೆ ಸಂವಿಧಾನ ಮೀಸಲಾತಿ ಸೌಲಭ್ಯವನ್ನು ಕಲ್ಪಿಸಿದೆ. ಈ ಮೀಸಲಾತಿ ಅವರಿಗೆ ನ್ಯಾಯಬದ್ಧವಾಗಿ ದೊರೆತಿರುವ ಅವಕಾಶವೇ ಹೊರತು, ಅನುಕಂಪದಿಂದ ದೊರೆತಿರುವುದಲ್ಲ. ಈಗ ರಾಜ್ಯ ರಾಜಕೀಯದಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಿರುವ ಬಲಿಷ್ಟ ಸಮುದಾಯಗಳು ಈಗ ಪಡೆಯುವ ಮೀಸಲಿನ ಪ್ರಮಾಣವನ್ನು ಹೆಚ್ಚಿಸಿಕೊಳ್ಳಲು ಪ್ರಯತ್ನಿಸುತ್ತಿವೆ. ರಾಜಕೀಯವಾಗಿ ಪ್ರಭಾವ ಬೀರಲಿಕ್ಕೆ ಸಾಧ್ಯವಿದೆ ಎನ್ನುವ ಕಾರಣದಿಂದಾಗಿ ಜಾತಿ ಸಮೀಕರಣಗಳು ರೂಪುಗೊಳ್ಳುತ್ತಿವೆ. ಇಂಥ ಹೋರಾಟಗಳ ಅಬ್ಬರದಲ್ಲಿ ಧ್ವನಿಯೇ ಇಲ್ಲದ ಸಣ್ಣಪುಟ್ಟ ಸಮುದಾಯಗಳ ಅಳಲನ್ನು ಯಾರು ಕೇಳಬೇಕು? ಸಾಮಾಜಿಕ ನ್ಯಾಯದ ಪರಿಕಲ್ಪನೆಯ ಗತಿಯೇನು? ಈ ಬಗ್ಗೆ ಯೋಚಿಸಬೇಕಾದ ಪ್ರಜ್ಞಾವಂತರೇ ಜಾತಿ ಧ್ರುವೀಕರಣಗಳ ಭಾಗವಾಗಿರುವುದು ದುರದೃಷ್ಟಕರ.

ವಿದ್ಯಾವಂತರು ಮಾತ್ರವಲ್ಲ, ಸಾಂವಿಧಾನಿಕ ಹುದ್ದೆಗಳನ್ನು ಹೊಂದಿರುವವರು ಹಾಗೂ ಸಾಹಿತ್ಯ ವಲಯದ ಕೆಲವರು ಜಾತಿ ಸಂಘಟನೆಯ ಸಭೆಗಳಲ್ಲಿ ಭಾಗವಹಿಸಿದ್ದಾರೆ. ಪ್ರಜಾ ಪ್ರತಿನಿಧಿಗಳು ಜಾತಿ ಸಂಘಟನೆಯ ಕಾರ್ಯಕ್ರಮಗಳಲ್ಲಿ ಭಾಗವಹಿಸುವುದು ಪ್ರಜಾಪ್ರಭುತ್ವ ವ್ಯವಸ್ಥೆ ಮತ್ತು ಸಂವಿಧಾನದ ಆಶಯಗಳಿಗೆ ವಿರುದ್ಧವಾದುದು. ಕನಿಷ್ಠಪಕ್ಷ ಸಾಂವಿಧಾನಿಕ ಹುದ್ದೆಗಳಲ್ಲಿ ಇರುವವರೆಗಾದರೂ ಆ ನಾಯಕರು ಜಾತಿ ಸಂಘಟನೆಗಳಿಂದ ಅಂತರ ಕಾಪಾಡಿಕೊಳ್ಳಬೇಕಾದುದು ಅಗತ್ಯ. ನೈತಿಕತೆಗೆ ತಾವು ಅತೀತರೆಂದು ವರ್ತಿಸುವ ಮೂಗುದಾರಗಳಿಲ್ಲದ ರಾಜಕಾರಣಿಗಳ ಮಾತಿರಲಿ, ಕೆಲವು ಸಾಹಿತಿಗಳು ಕೂಡ ಮೌಲ್ಯಗಳಿಗೆ ತರ್ಪಣ ಬಿಟ್ಟಂತೆ ವರ್ತಿಸುತ್ತಿರುವುದು ಕಳವಳ ಹುಟ್ಟಿಸುವಂತಹದ್ದು. ಇದುವರೆಗೆ ತಮ್ಮ ಬರಹ ಭಾಷಣಗಳ ಮೂಲಕ ಜಾತ್ಯತೀತ ಮೌಲ್ಯಗಳನ್ನು ಪ್ರತಿಪಾದಿಸಿಕೊಂಡು ಬಂದ ಕವಿ–ಕಥೆಗಾರರಲ್ಲಿ ಒಮ್ಮೆಗೇ ಜಾತಿಪ್ರೇಮ ಜಾಗೃತಗೊಂಡಿರುವುದಕ್ಕೆ ಯಾವ ಸಮರ್ಥನೆಯೂ ಇಲ್ಲ. ಬರಹ ಬೇರೆ, ವಾಸ್ತವ ಬೇರೆ ಎನ್ನುವುದನ್ನು ಈ ಬರಹಗಾರರು ಸಾಬೀತುಪಡಿಸಲಿಕ್ಕೆ ಹೊರಟಂತೆ ಕಾಣಿಸುತ್ತದೆ. ಸಾಹಿತ್ಯವೂ ಸೇರಿದಂತೆ, ಪ್ರತಿಯೊಂದು ಕಲೆಯ ಆಳದಲ್ಲಿ ಜನಸಾಮಾನ್ಯರ ಹಿತಾಸಕ್ತಿಯೇ ಅಡಗಿರುತ್ತದೆ. ಬರಹ ಮತ್ತು ಬದುಕಿನ ಮೂಲಕ ಸಮಾಜದ ನೈತಿಕ ತಳಹದಿ ಬಲಪಡಿಸಬೇಕಾದ ಹಾಗೂ ದೀನ ದಲಿತ ವರ್ಗಗಳ ಬಗ್ಗೆ ಕಾಳಜಿ ಹೊಂದಿರಬೇಕಾದ ಬರಹಗಾರರು, ಕಲಾವಿದರು ಜಾತೀಯಪ್ರಜ್ಞೆಯನ್ನು ಮೈಗೂಡಿಸಿಕೊಳ್ಳುವುದು ಅಪಾಯಕರ. ಸಾಮಾಜಿಕ ಸೌಹಾರ್ದದ ನಡಿಗೆ ಕವಲುದಾರಿಗಳಲ್ಲಿ ದಿಕ್ಕುತಪ್ಪುವುದಾದರೆ, ಕಲೆ–ಸಾಹಿತ್ಯದಿಂದ ನಾವು ಪಡೆದದ್ದೇನು ಎನ್ನುವುದರ ಬಗ್ಗೆಯೇ ಆತ್ಮಾವಲೋಕನ ಮಾಡಿಕೊಳ್ಳಬೇಕಾಗುತ್ತದೆ.

ಜಾತಿ–ಧರ್ಮಗಳ ಹೆಸರಿನಲ್ಲಿ ಕೆಸರೆರಚಾಟಕ್ಕೆ ಸಾಮಾಜಿಕ ಜಾಲತಾಣಗಳು ಬಳಕೆಯಾಗುತ್ತಿರುವುದು ಕೂಡ ವಿದ್ಯಾವಂತರಲ್ಲಿ ಮತೀಯಭಾವ ಹೆಚ್ಚುತ್ತಿರುವುದಕ್ಕೆ ಉದಾಹರಣೆಯಂತಿದೆ. ಸಂಕುಚಿತ ಚೌಕಟ್ಟುಗಳನ್ನು ಮೀರಿ, ಇಡೀ ಜಗತ್ತನ್ನು ಒಂದೆಡೆ ಬೆಸೆಯುವ ಆಶಯ ಸಾಮಾಜಿಕ ಜಾಲತಾಣದ ಪರಿಕಲ್ಪನೆಯಲ್ಲಿದೆ. ಆದರೆ, ಎಂಥ ಉದಾತ್ತ ಆಶಯಗಳ ನಡುವೆಯೂ ಚಿಗುರೊಡೆಯುವಷ್ಟು ತೀವ್ರವಾಗಿದೆ ನಮ್ಮೊಳಗಿನ ಜಾತಿಪ್ರಜ್ಞೆ. ಅದರ ಪರಿಣಾಮವಾಗಿಯೇ ಸ್ನೇಹ–ಸೌಹಾರ್ದ–ವಿಚಾರಮಂಥನಕ್ಕೆ ಕಾರಣವಾಗಬೇಕಿದ್ದ ಡಿಜಿಟಲ್ ಮಾಧ್ಯಮಗಳು ಕೋಳಿಜಗಳಿಗಳಿಗೆ ವೇದಿಕೆಯಾಗಿವೆ. ಈವರೆಗೆ ಕಲ್ಲು ಮಣ್ಣು ಸಿಮೆಂಟಿನ ಗೋಡೆಗಳನ್ನು ನೋಡಿದ್ದ ನಾವು, 'ಡಿಜಿಟಲ್ ಗೋಡೆ'ಗಳನ್ನು ಕಟ್ಟಿಕೊಳ್ಳಲು ಪಳಗುತ್ತಿದ್ದೇವೆ.

ಜಾತಿ ಯಾರೊಬ್ಬರ ಕೀಳರಿಮೆಗೆ ಕಾರಣವಾಗಬಾರದು; ಮೇಲರಿಮೆಯನ್ನಂತೂ ಹುಟ್ಟಿಸಲೇಬಾರದು. ಮೇಲ್ವರ್ಗದವರಂತೂ ತಮ್ಮ ಜಾತಿಯ ಕುರುಹುಗಳ ಬಗ್ಗೆ ಮತ್ತಷ್ಟು ಎಚ್ಚರವಾಗಿರಬೇಕು. ಜಾತಿಯ ಮೇಲರಿಮೆಯನ್ನು ಸಾರ್ವಜನಿಕವಾಗಿ ಪ್ರದರ್ಶಿಸುವುದೂ ಒಂದು ರೀತಿಯಲ್ಲಿ ಅಸ್ಪೃಶ್ಯತೆಯ ಆಚರಣೆಯೇ. ಈ ಸೂಕ್ಷ್ಮವನ್ನು ಸುಶಿಕ್ಷಿತರೆನ್ನಿಸಿಕೊಂಡವರು, ಕವಿ–ಕಥೆಗಾರರು ಅರಿಯದೆ ಹೋದಲ್ಲಿ, ಜಾತಿಯ ಜಡ್ಡಿಗೆ ಮದ್ದು ಕನಸಾಗಿಯೇ ಉಳಿಯುತ್ತದೆ.

■ ರಘುನಾಥ ಚ.ಹ.